# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 01 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 423 (484) |
| 02 | ಸದಸ್ಯರ ಹೆಸರು | : | ಡಾ: ವೈ.ಎ.ನಾರಾಯಣಸ್ವಾಮಿ<br>(ಶಿಕ್ಷಕರ ಕ್ಷೇತ್ರ) |
| 03 | ಉತ್ತರಿಸುವ ದಿನಾಂಕ | : | 16–12–2021 |
| 04 | ಉತ್ತರಿಸುವ ಸಚಿವರು | : | ಗೃಹ ಸಚಿವರು. |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವಂತಹ ವಿದೇಶಿ ಪ್ರಜೆಗಳ ಸಮೀಕ್ಷೆ ನಡೆಸಲಾಗಿದೆಯೇ; ನಡೆಸಿದ್ದಲ್ಲಿ ಜಿಲ್ಲಾವಾರು ನೀಡುವುದು;</td><td>ರಾಜ್ಯದಲ್ಲಿನ ವಿದೇಶಿ ಪ್ರಜೆಗಳ ಬಗ್ಗೆ ಪ್ರತಿ ಮಾಹೆಯಾನ ಪ್ರಾದೇಶಿಕ ವಿದೇಶಿ ನೋಂದಣಾಧಿಕಾರಿ (ಎಫ್.ಆರ್.ಆರ್.ಓ.) ಬೆಂಗಳೂರು ಕಛೇರಿಯಿಂದ ಮಾಹಿತಿ ಪಡೆದು, ಅಕ್ರಮವಾಗಿ ನೆಲೆಸಿರುವ ವಿದೇಶಿ ಪ್ರಜೆಗಳನ್ನು ಪತ್ತೆಹಚ್ಚಿ ಕ್ರಮ ಜರುಗಿಸಲಾಗುತ್ತಿದೆ.</td></tr>
<tr><td>ಆ)</td><td>ವಿದೇಶಿ ಪ್ರಜೆಗಳು ಅಕ್ರಮವಾಗಿ ನೆಲೆಸಿರುವ ಬಗ್ಗೆ ಜಿಲ್ಲಾವಾರು ಮಾಹಿತಿ ನೀಡುವುದು;</td><td>ಅಕ್ರಮವಾಗಿ ನೆಲಸಿರುವ ವಿದೇಶಿಯರ ಜಿಲ್ಲಾವಾರು ಮಾಹಿತಿ ಕೆಳಗಿನಂತಿದೆ.
<table>
<tr><th>ಕ್ರ.ಸ</th><th>ಘಟಕಗಳು</th><th>ಅಕ್ರಮ ವಿದೇಶಿಯರ ಸಂಖ್ಯೆ</th></tr>
<tr><td>1</td><td>ಬೆಂಗಳೂರು ನಗರ</td><td>632</td></tr>
<tr><td>2</td><td>ಮೈಸೂರು ನಗರ</td><td>26</td></tr>
<tr><td>3</td><td>ಬಾಗಲಕೋಟೆ</td><td>1</td></tr>
<tr><td>4</td><td>ಬೀದರ್</td><td>3</td></tr>
<tr><td>5</td><td>ಹುಬ್ಬಳ್ಳಿ–ಧಾರವಾಡ ನಗರ</td><td>20</td></tr>
<tr><td>6</td><td>ಕೊಡಗು</td><td>1</td></tr>
<tr><td>7</td><td>ಮಂಗಳೂರು ನಗರ</td><td>2</td></tr>
<tr><td>8</td><td>ರಾಮನಗರ</td><td>11</td></tr>
<tr><td>9</td><td>ತುಮಕೂರು</td><td>1</td></tr>
<tr><td>10</td><td>ಉಡುಪಿ</td><td>1</td></tr>
<tr><td>11</td><td>ಉತ್ತರ ಕನ್ನಡ ಜಿಲ್ಲೆ</td><td>4</td></tr>
<tr><td>12</td><td>ವಿಜಯಪುರ</td><td>1</td></tr>
<tr><td></td><td>ಒಟ್ಟು</td><td>703</td></tr>
</table></td></tr>
<tr><td>ಇ)</td><td>ಬೆಂಗಳೂರು ಮಹಾ ನಗರದಲ್ಲಿ ಅಕ್ರಮವಾಗಿ ನೆಲೆಸಿರುವ ವಿದೇಶಿ ಪ್ರಜೆಗಳಿಂದ ಕಾನೂನು ಬಾಹಿರ ಚಟುವಟಿಕೆಗಳು</td><td>ಅಕ್ರಮವಾಗಿ ನೆಲೆಸಿರುವ ವಿದೇಶಿ ಪ್ರಜೆಗಳು ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವ ಬಗ್ಗೆ ಕಳೆದ ಮೂರು ವರ್ಷಗಳಿಂದ 296 ಪ್ರಕರಣವನ್ನು ದಾಖಲಿಸಿದ್ದು, 441 ಜನ ವಿದೇಶಿ ಪ್ರಜೆಗಳ ವಿರುದ್ಧ ಕ್ರಮ ಜರುಗಿಸಿರುವ ಬಗ್ಗೆ ಎಫ್‌ಆರ್‌ಆರ್‌ಓ ಕಛೇರಿಯಿಂದ ಮಾಹಿತಿ</td></tr>
</table>

| | | |
|---|---|---|
| | ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ವಿವರಗಳನ್ನು ನೀಡುವುದು; | ಪಡೆಯಲಾಗಿರುತ್ತದೆ. ಯಾವುದೇ ದೇಶದ ವಿದೇಶಿ ಪ್ರಜೆಯು ಅಕ್ರಮ ಚಟುವಟಿಕೆಯಲ್ಲಿ ಭಾಗಿಯಾದಲ್ಲಿ ಅವರ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುತ್ತಿದೆ. ವಿದೇಶಿ ಪ್ರಜೆಗಳ ವಿರುದ್ಧ ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದಲ್ಲಿ ಮಾನ್ಯ ನ್ಯಾಯಾಲಯದಲ್ಲಿ ಸದರಿ ಪ್ರಕರಣಗಳು ಇತ್ಯರ್ಥಗೊಂಡ ನಂತರ ವಿದೇಶಿ ಪ್ರಜೆಗಳ ವೀಸಾ ಅವಧಿ ಮುಕ್ತಾಯಗೊಂಡಿದ್ದಲ್ಲಿ ವಿದೇಶಿ ಪ್ರಜೆಗಳನ್ನು ಗಡಿಪಾರು ಮಾಡುವವರಗೆ ಡಿಟೆನ್ಷನ್ ಸೆಂಟರ್‌ನಲ್ಲಿ ಇರಿಸಲಾಗುತ್ತದೆ, ಅದೇ ರೀತಿ ವೀಸಾ ಅವದಿ ಮುಗಿದ (Over Stay) ವಿದೇಶಿ ಪ್ರಜೆಗಳನ್ನು ಸಂಬಂಧಪಟ್ಟ ಇಲಾಖೆಯಿಂದ ನಿರ್ಗಮನ ಪರವಾನಿಗೆಯನ್ನು (Exit Permit) ಪಡೆಯುವವರೆಗೆ ಡಿಟೆನ್ಷನ್ ಸೆಂಟರ್‌ನಲ್ಲಿ ಇರಿಸಲಾಗುತ್ತದೆ. ನಂತರ ಸದರಿ ವಿದೇಶಿ ಪ್ರಜೆಯ ಗಡಿಪಾರು ನಿಯಮವನ್ನು ಪಾಲಿಸಲಾಗುತ್ತದೆ. |
| ಈ) | ಇಂತಹ ಅಕ್ರಮವಾಗಿ ನೆಲೆಸಿರುವ ವಿದೇಶಿ ಪ್ರಜೆಗಳನ್ನು ನಿರ್ವಹಿಸದೇ ಇರುವ ಸಂಬಂಧಪಟ್ಟ ಪೊಲೀಸ್ ಠಾಣೆಯ ಅಧಿಕಾರಿಯ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು: (ವಿವರಗಳನ್ನು ನೀಡುವುದು) | ರಾಜ್ಯದಲ್ಲಿ ವಿದೇಶಿ ಪ್ರಜೆಗಳು ಅನಧಿಕೃತವಾಗಿ/ಅವಧಿ ಮೀರಿ ವಾಸವಾಗಿರುವ ವಿದೇಶಿ ಪ್ರಜೆಗಳನ್ನು ಪತ್ತೆ ಮಾಡಲು ಠಾಣೆಗಳಿಂದ ನುರಿತ ಅಧಿಕಾರಿ ಮತ್ತು ಸಿಬ್ಬಂದಿರವರುಗಳ ತಂಡವನ್ನು ರಚಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿರುತ್ತದೆ. ಅನಧಿಕೃತವಾಗಿ ವಿದೇಶಿ ಪ್ರಜೆಗಳು ವಾಸ ಮಾಡಲು ಸಹಕರಿಸಿ ತಮ್ಮ ಕರ್ತವ್ಯವನ್ನು ನಿರ್ವಹಿಸದೇ ಹಾಗೂ ಕರ್ತವ್ಯ ಲೋಪವೆಸಗಿದಂತಹ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧವೂ ಸಹ ಸೂಕ್ತ ಕ್ರಮ ಜರುಗಿಸಲಾಗುವುದು. |

ಸಂಖ್ಯೆ: ಒಇ 377 ಪಿಎಂಎಸ್ 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು